# ಏ.28ಕ್ಕೆ ಉಜ್ಜೀವನ್ ಫೈನಾನ್ಸ್ ಐಪಿಒ

ನವದೆಹಲಿ (ಪಿಟಿಐ): ಥೈರೋಕೇರ್ ಟೆಕ್ನಾಲಜೀಸ್ ಮತ್ತು ಉಜ್ಜೀವನ್ ಫೈನಾನ್ಸ್ ಸರ್ವೀಸಸ್ ಕಂಪೆನಿಗಳು ಮುಂದಿನ ವಾರ ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಮೂಲಕ ಷೇರುಪೇಟೆ ಪ್ರವೇಶಿಸಲಿವೆ.

ಉಜ್ಜೀವನ್ ಫೈನಾನ್ಸ್‌ನ ಷೇರುಗಳನ್ನು ಖರೀದಿಸಲು ಏಪ್ರಿಲ್ 28 ರಿಂದ ಮೇ 2ರವರೆಗೆ ಅವಕಾಶವಿದೆ.

ಹೊಸದಾಗಿ ₹358 ಕೋಟಿ ಮೌಲ್ಯದ ಷೇರುಗಳನ್ನು ಬಿಡುಗಡೆ ಮಾಡಿದ್ದು, ಮಾರಾಟ ಕೊಡುಗೆಯಡಿ ಹೂಡಿಕೆದಾರರ 2.49 ಕೋಟಿ ಷೇರುಗಳನ್ನು ಖರೀದಿಗೆ ಮುಕ್ತಗೊಳಿಸಲಾಗಿದೆ.

ಕೋಟಕ್ ಮಹೀಂದ್ರ ಕ್ಯಾಪಿಟಲ್, ಆ್ಯಕ್ಸಿಸ್ ಕ್ಯಾಪಿಟಲ್, ಐಸಿಐಸಿಐ ಸೆಕ್ಯುರಿಟೀಸ್ ಮತ್ತು ಐಐಎಫ್‌ಎಲ್ ಹೋಲ್ಡಿಂಗ್ಸ್ ಕಂಪೆನಿಗಳು ಖರೀದಿ ವಹಿವಾಟು ನಿರ್ವಹಿಸಲಿವೆ.

ಥೈರೋಕೇರ್ ಟೆಕ್ನಾಲಜೀಸ್ ಷೇರುಗಳ ಖರೀದಿಗೆ ಏಪ್ರಿಲ್ 27 ರಿಂದ ಅವಕಾಶ ನೀಡಲಾಗಿದೆ. ಪ್ರತಿ ಷೇರಿನ ಬೆಲೆಯು ₹420 ರಿಂದ ₹446ರಂತೆ 1.07 ಕೋಟಿ ಷೇರುಗಳ ಮಾರಾಟದ ಮೂಲಕ ₹480 ಕೋಟಿ ಸಂಗ್ರಹಿಸುವ ನಿರೀಕ್ಷೆ ಇಟ್ಟುಕೊಂಡಿದೆ.

ಜೆಎಂ ಫೈನಾನ್ಸ್ ಇನ್‌ಸ್ಟಿಟ್ಯೂಷನಲ್ ಸೆಕ್ಯುರಿಟೀಸ್, ಎಡೆಲ್ವೀಸ್ ಫೈನಾನ್ಶಿಯಲ್ ಸರ್ವೀಸಸ್ ಮತ್ತು ಐಸಿಐಸಿಐ ಸೆಕ್ಯುರಿಟೀಸ್ ಕಂಪೆನಿಗಳು ವಹಿವಾಟು ನಿರ್ವಹಿಸಲಿವೆ.